<u>**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.**</u>

<u>ಸಿ.ಸಿ. ನಂ.10/2009</u>

CW-2/PW-4

| | | |
|---|---|---|
| ಹೆಸರು | : | ಅಬ್ದುಲ್ ಸಾದಿಕ್ |
| ತಂದೆ ಹೆಸರು | : | ಅಬ್ದುಲ್ ಶುಕೂರ |
| ವಯಸ್ಸು | : | 46 ವರ್ಷ |
| ವೃತ್ತಿ | : | ಪೇಂಟಿಂಗ್ |
| ವಾಸ ಸ್ಥಳ | : | ಕೊಳ್ಳೇಗಾಲ |
| ದಿನಾಂಕ | : | 23-10-2025. |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ಚಾಸಾ 1 ಮತ್ತು 8 ನನಗೆ ಗೊತ್ತು. ಈ ಕೇಸಿನ ಬಗ್ಗೆ ನನಗೆ ಗೊತ್ತಿದೆ. ನಿಪಿ 1 ರಲ್ಲಿ ಸಾಕ್ಷಿ ತಮ್ಮ ಸಹಿಯನ್ನು **ನಿಪಿ 1(ಸಿ)** ಎಂದು ಗುರುತಿಸಿದ್ದು, ಅದನ್ನು ಸುಮಾರು 20 ವರ್ಷಗಳ ಹಿಂದೆ ಬೆಂಗಳೂರಿನಿಂದ ಚಾಸಾ 1 ರವರು ಲಾರಿಯಲ್ಲಿ ಕಬ್ಬಿಣ ತುಂಬಿಕೊಂಡು ಬರುತ್ತಿದ್ದಾಗ ರಾಮನಗರದಿಂದ ಎರಡು ಕಿ.ಮೀ ದೂರದ ಬಳಿ ದರೋಡೆ ವಿಚಾರವಾಗಿ ಪೊಲೀಸರು ಮಹಜರ್ ಮಾಡಿದರು. ಆ ಕಾಲಕ್ಕೆ ನಿಪಿ 1 ಕ್ಕೆ ಸಹಿ ಮಾಡುತ್ತೇನೆ, ಮಹಜರ ಮಾಡಿದ್ದು ಬೆಳಿಗ್ಗೆ 8.30 ಗಂಟೆಗೆ. ಮಹಜರ ಕಾಲಕ್ಕೆ ಇನ್ನು ಇಬ್ಬರು ಮೂರು ಜನ ಇದ್ದರು. ಮಹಜರ ಬರೆದ ಸ್ಥಳ ನಿಖರವಾಗಿರಿ ಗೊತ್ತಿಲ್ಲ.

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

<u>ಸಿ.ಸಿ. ನಂ.10/2009ರಲ್ಲಿ</u>
CW-2/PW-4

<u>ಪಾಟೀ ಸವಾಲುಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ಮಹಜರ ಬರೆದದ್ದು ಬೆಂಗಳೂರು-ಮೈಸೂರು ಹೆದ್ದಾರಿ ಸಂಗಬಸವನದೊಡ್ಡಿಯ ಗೇಟ್ ನ ಬಳಿ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.